ತಾಲ್ಲೂಕಿನಲ್ಲಿ ಮಾಜಿ ಪ್ರಧಾನಿ ಪ್ರತಿಮೆ

ಕಂಚಿನ ಪುತ್ಥಳಿಯ ಅನಾವರಣ ಕಾರ್ಯಕ್ರಮ ನ.24ರಂದು ಸಾಮಂದಿಪುರ ಗ್ರಾಮದಲ್ಲಿ ನಡೆಯಲಿದೆ

ಇಂದು ದೇವೇಗೌಡರ ಪ್ರತಿಮೆ ಅನಾವರಣ

ಚನ್ನಪಟ್ಟಣ: ತಾಲ್ಲೂಕಿನ ಸಾಮಂದಿಪುರ ಗ್ರಾಮದ ವೃತ್ತದಲ್ಲಿ ನಿರ್ಮಾಣ ಮಾಡಲಾಗಿರುವ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ಅವರ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮ ನ.24ರಂದು ಗ್ರಾಮದಲ್ಲಿ ನಡೆಯಲಿದೆ.

ಅನಾವರಣವಾಗಲು ಸಿದ್ಧಗೊಂಡಿರುವ ದೇವೇಗೌಡ ಪುತ್ಥಳಿ

ಸುಮಾರು 7 ಅಡಿ ಎತ್ತರದ ಈ ಪ್ರತಿಮೆಯನ್ನು ದೇವೇಗೌಡ ಅವರ ಅಭಿಮಾನಿಗಳು ಹಾಗೂ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಸುಮಾರು ₹35 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದು, ಕಳೆದ ಒಂದು ವರ್ಷದಿಂದ ಈ ಪ್ರತಿಮೆ ನಿರ್ಮಾಣ ಕಾಮಗಾರಿ ನಡೆದಿತ್ತು.

ತಾಲ್ಲೂಕಿನಲ್ಲಿ ಪ್ರಧಾನಮಂತ್ರಿಯೊಬ್ಬರ ಪ್ರತಿಮೆ ಅನಾವರಣಗೊಳ್ಳುತ್ತಿರುವುದು ಇದೇ ಮೊದಲಾಗಿರುವುದು ವಿಶೇಷವಾಗಿದೆ. ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಶಾಸಕಿ ಅನಿತಾ ಕುಮಾರಸ್ವಾಮಿ, ಹಲವಾರು ಮಂತ್ರಿಗಳು, ಶಾಸಕರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸ್ಫೋಟದಲ್ಲಿ ಟಿ.ವಿ, ಹಾಸಿಗೆ ಮತ್ತಿತರ ಉಪಕರಣ ಸುಟ್ಟು ಹೋಗಿವೆ

ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ: ವೃದ್ಧೆಗೆ ಗಾಯ

ಪ್ರಜಾವಾಣಿ ವಾರ್ತೆ

ಕನಕಪುರ: ಅಡುಗೆ ಅನಿಲ ಸೋರಿಕೆಯಿಂದಾಗಿ ಬೆಂಕಿ ಹೊತ್ತಿಕೊಂಡು ಮನೆಯಲ್ಲಿದ್ದ ಟಿ.ವಿ ಸ್ಫೋಟಿಸಿದ್ದು ಹಲವು ಉಪಕರಣಗಳು ಹಾನಿ|ಗೀಡಾಗಿವೆ. ಉಯ್ಯಂಬಳ್ಳಿ ಹೋಬಳಿ ಹೂಕುಂದ ಗ್ರಾಮದ ಗುಂಡೇಗೌಡರ ಮನೆಯಲ್ಲಿ ಈ ಅವಘಡ ಸಂಭವಿಸಿದೆ.

ಮನೆಯಲ್ಲಿದ್ದ ವೆಂಕಟಲಕ್ಷ್ಮಮ್ಮ (65) ತೀವ್ರವಾಗಿ ಗಾಯಗೊಂಡಿದ್ದು, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯುತ್ ಉಪಕರಣ, ಹಾಸಿಗೆ, ಮಂಚ ಸೇರಿದಂತೆ ₹2ಲಕ್ಷ ಮೌಲ್ಯದ ಉಪಕರಣಗಳು ನಾಶವಾಗಿವೆ.

ಘಟನೆ ವಿವರ: ಗುಂಡೇಗೌಡ ಅವರು ಸ್ವಗ್ರಾಮದಲ್ಲಿ ಮನೆ ನಿರ್ಮಿಸಿ, ತಾಯಿ ವೆಂಕಟಲಕ್ಷ್ಮಮ್ಮ ಒಬ್ಬರನ್ನೇ ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿದ್ದರು. ಅವರು ಗುರುವಾರ ಬೆಳಿಗ್ಗೆ ಮನೆಯಲ್ಲಿ ಅಡುಗೆ ಕೆಲಸ ಮುಗಿಸಿ, ನಂತರ ಜಮೀನಿನ ಕೆಲಸಕ್ಕೆ ತೆರಳಿದ್ದರು. ಮನೆಗೆ ಸಂಜೆ 6ಕ್ಕೆ ವಾಪಸ್ ಬಂದು ದೇವರಿಗೆ ದೀಪ ಹಚ್ಚಲು ಬೆಂಕಿ ಕಡ್ಡಿ ಗೀರಿದಾಗ ಬೆಂಕಿ ಹೊತ್ತಿಕೊಂಡಿದೆ.

ಬೆಂಕಿಯಲ್ಲಿ ಸಿಲುಕಿಕೊಂಡಿದ್ದ ಅವರ ಚೀರಾಟ ಕೇಳಿ ನೆರೆಯವರು ಕೂಡಲೇ ಸಹಾಯಕ್ಕೆ ಧಾವಿಸಿ ಸುಟ್ಟ ಗಾಯಗಳಿಂದ ನರಳುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್ ಮುದಗೆರೆ ಶಾಖೆ ಉಳಿಸಲು ಒತ್ತಾಯ

ಬ್ಯಾಂಕ್ ಶಾಖೆ ವಿಲೀನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಮುದಗೆರೆ ಗ್ರಾಮದಲ್ಲಿರುವ ಎಸ್.ಬಿ.ಐ. ಶಾಖೆಯನ್ನು ಚನ್ನಪಟ್ಟಣ ಎಸ್.ಬಿ.ಐ.ನೊಂದಿಗೆ ವಿಲೀನ ಮಾಡುವ ಪ್ರಕ್ರಿಯೆ ಕೈಬಿಡುವಂತೆ ಆಗ್ರಹಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಪದಾಧಿಕಾರಿಗಳು ಹಾಗೂ ಬ್ಯಾಂಕ್ ಗ್ರಾಹಕರು ಶುಕ್ರವಾರ ಬ್ಯಾಂಕ್ ಎದುರು ಪ್ರತಿಭಟನೆ ನಡೆಸಿದರು.

1980ರಲ್ಲಿ ಈ ಬ್ಯಾಂಕ್ ಎಸ್.ಬಿ.ಎಂ. ಹೆಸರಿನಲ್ಲಿ ಪ್ರಾರಂಭವಾಗಿತ್ತು. ಇದೀಗ ಬ್ಯಾಂಕ್ ಎಸ್.ಬಿ.ಐ. ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದರೆ ಈ ಎಸ್.ಬಿ.ಐ. ಬ್ಯಾಂಕ್ ಶಾಖೆಯನ್ನು ಮತ್ತೆ ಚನ್ನಪಟ್ಟಣ ಎಸ್.ಬಿ.ಐ. ಬ್ಯಾಂಕ್ ಗೆ ವಿಲೀನ ಮಾಡಿ ಮುದಗೆರೆ ಶಾಖೆಯನ್ನು ಮುಚ್ಚುವ ಹುನ್ನಾರ ಮಾಡಲಾಗುತ್ತಿದೆ. ಇದರಿಂದ ಈ ಭಾಗದ ಜನರಿಗೆ ಆರ್ಥಿಕ ವಹಿವಾಟು ನಡೆಸಲು ಅನಾನುಕೂಲವಾಗುತ್ತದೆ ಎಂದು ಪ್ರತಿಭಟನಕಾರರು ಕಿಡಿಕಾರಿದರು.

ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಘಟಕ ಅಧ್ಯಕ್ಷ ರಮೇಶ್ ಗೌಡ ಮಾತನಾಡಿ, ಅನೇಕ ವರ್ಷಗಳಿಂದ ಮುದಗೆರೆ ಶಾಖೆಯು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಶಾಖೆಯಿಂದ ಅನೇಕ ವಿದ್ಯಾರ್ಥಿಗಳು, ಸ್ತ್ರೀಶಕ್ತಿ ಸಂಘದ ಮಹಿಳೆಯರು, ಪಿಂಚಣಿದಾರರಿಗೆ ಅನುಕೂಲವಾಗಿತ್ತು. ಜೊತೆಗೆ ಈ ಶಾಖೆಯಲ್ಲಿ ದಿನವಹಿ ₹10 ಲಕ್ಷ ವಹಿವಾಟು ನಡೆಯುತ್ತಿದ್ದು, ಈ ಬ್ಯಾಂಕಿನಿಂದ ಸುತ್ತಲಿನ ಜನರು ಉಪಯೋಗ ಪಡೆದುಕೊಳ್ಳುತ್ತಿದ್ದರು. ಆದರೆ ಬ್ಯಾಂಕಿನ ಮೇಲಧಿಕಾರಿಗಳು ಇಷ್ಟು ವಹಿವಾಟು ನಡೆಸುತ್ತಿರುವ ಬ್ಯಾಂಕ ಅನ್ನು ಚನ್ನಪಟ್ಟಣ ಶಾಖೆ ಜೊತೆ ವಿಲೀನ ಮಾಡುತ್ತಿರುವುದು ನಾಚಿಕೆಗೇಡಿನ ವಿಚಾರ ಎಂದರು.

ಚನ್ನಪಟ್ಟಣ ತಾಲ್ಲೂಕಿನ ಮುದಗೆರೆ ಎಸ್.ಬಿ.ಐ. ಶಾಖೆಯನ್ನು ಪಟ್ಟಣದ ಎಸ್.ಬಿ.ಐ. ಜೊತೆ ವಿಲೀನ ಮಾಡುವ ಪ್ರಕ್ರಿಯೆ ಕೈಬಿಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು

ಬ್ಯಾಂಕ್ ಅನ್ನು ಪಟ್ಟಣಕ್ಕೆ ವರ್ಗಾವಣೆಗೊಳಿಸುವುದರಿಂದ ಮಹಿಳೆಯರು ಹಾಗೂ ಪಿಂಚಣಿದಾರರಿಗೆ ಸಾಕಷ್ಟು ಅನಾನುಕೂಲವಾಗಲಿದೆ. ಪಟ್ಟಣ ಶಾಖೆಯಲ್ಲಿ ಸಾವಿರಾರು ಗ್ರಾಹಕರಿದ್ದು, ಅಲ್ಲಿ ಯಾವಾಗಲೂ ಬ್ಯಾಂಕ್ ಗ್ರಾಹಕರಿಂದ ತುಂಬಿ ತುಳುಕುತ್ತಿರುತ್ತದೆ. ಶಾಖೆಯಲ್ಲಿ ಗ್ರಾಹಕರು ಕೆಲವು ನಿಮಿಷಗಳಲ್ಲಿ ವ್ಯವಹಾರ ನಡೆಸಿಕೊಂಡು ಹೋಗುತ್ತಾರೆ. ಆದರೆ ಅತಿ ಹೆಚ್ಚು ಖಾತೆಗಳನ್ನು ಹೊಂದಿರುವ ಪಟ್ಟಣದ ಶಾಖೆಗೆ ಹೋದರೆ ಒಂದು ದಿನವೆಲ್ಲಾ ಬ್ಯಾಂಕಿನಲ್ಲಿಯೇ ಕಳೆಯುವಂತಾಗುತ್ತದೆ. ಇದರಿಂದ ಗ್ರಾಹಕರು ಹಾಗೂ ರೈತರಿಗೆ ಯಾವ ರೀತಿಯ ಪ್ರಯೋಜನವಾಗುತ್ತದೆ ಎಂದು ಪ್ರಶ್ನಿಸಿದರು.

ವೇದಿಕೆಯ ಜಿಲ್ಲಾ ಘಟಕ ಅಧ್ಯಕ್ಷ ಯೋಗೀಶ್ ಗೌಡ, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಉಮಾಶಂಕರ್, ಮದ್ದೂರು ತಾಲ್ಲೂಕು ಅಧ್ಯಕ್ಷ ತಿಪ್ಪೂರು ರಾಜೇಶ್, ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆಣಿಗೆರೆ ಮಲ್ಲಯ್ಯ, ಜೆಡಿಎಸ್ ವಕ್ತಾರ ಜೈಕುಮಾರ್, ಮುಖಂಡ ಮೆಹರೀಶ್, ಮಾಜಿ ಗ್ರಾ.ಪಂ. ಅಧ್ಯಕ್ಷರಾದ ನಾಗೇಂದ್ರ, ಕೆಂಪೇಗೌಡ, ಗ್ರಾ.ಪಂ. ಸದಸ್ಯೆ ಸತ್ಯವತಿ, ಮುಖಂಡರಾದ ಸಂತೋಷ್, ಸಂಪತ್, ಜಗದೀಶ್, ಸೋಮಶೇಖರ್, ಶಿವರಾಮು, ನಾಗಣ್ಣ, ಅಂಕಣ್ಣ, ಶೈಲಜಾ, ಮಲ್ಲೇಶ್, ಮಹದೇವು, ತಿಬ್ಬಣ್ಣ, ಪ್ರೇಮ, ಬೆಳಕೆರೆ ನಾಗೇಶ್, ಓದೇಶ್, ತಮ್ಮಯ್ಯ, ಅಭಿ, ಕುಮಾರ್, ಶಿವಮ್ಮ, ಮಂಚಮ್ಮ, ಪುಷ್ಪ, ಮಂಜುಳ, ಮಂಗಳಮ್ಮ, ಜ್ಯೋತಿ, ಕಮಲ, ವಿಮಲ, ವಾಣಿ, ವರಲಕ್ಷ್ಮಿ ಹಾಗೂ ಸುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

50 ಶಾಖೆ ವಿಲೀನ

ಸ್ಥಳಕ್ಕೆ ಬಂದ ಮುಖ್ಯ ಶಾಖೆಯ ವ್ಯವಸ್ಥಾಪಕ ದಿನೇಶ್ ಅವರು, 'ಕೇಂದ್ರ ಶಾಖೆಯು ಇಡೀ ರಾಜ್ಯದಲ್ಲಿ 50 ಬ್ಯಾಂಕ್ ಶಾಖೆಗಳನ್ನು ವಿಲೀನಗೊಳಿಸಲು ಮುಂದಾಗಿದ್ದು ಅದರಲ್ಲಿ ಮುದಗೆರೆ ಶಾಖೆಯು ಒಂದಾಗಿದೆ. ಇದನ್ನು ಸ್ಥಳಾಂತರ ಮಾಡಿದರೂ ನಿಮ್ಮ ಖಾತೆಗಳೆಲ್ಲಾ ಹಾಗೆಯೇ ಉಳಿದುಕೊಳ್ಳುತ್ತವೆ. ಆದರೆ ಇಲ್ಲಿ ಸೇವಾ ಕೇಂದ್ರವನ್ನು ಪ್ರಾರಂಭ ಮಾಡಿ ವ್ಯವಹಾರವನ್ನೆಲ್ಲಾ ಮುಂದುವರೆಸಲಾಗುತ್ತದೆ' ಎಂದು ತಿಳಿಸಿದರು.

'ನಿಮ್ಮ ಸೇವಾ ಕೇಂದ್ರದ ಅವಶ್ಯಕತೆ ನಮಗಿಲ್ಲ. ಅದು ಕೇವಲ ಗುಮಾಸ್ತನ ಕೆಲಸ. ಆದ್ದರಿಂದ ಬ್ಯಾಂಕನ್ನು ಸ್ಥಳಾಂತರ ಮಾಡಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಪಟ್ಟಣದ ಬ್ಯಾಂಕಿನಲ್ಲಿ 40 ಸಾವಿರ ಖಾತೆಗಳಿವೆ. ಈ ಶಾಖೆಯನ್ನು ಅಲ್ಲಿಗೆ ಸ್ಥಳಾಂತರಿಸುವುದರಿಂದ ಸಾಕಷ್ಟು ಅನಾನುಕೂಲವಾಗುತ್ತದೆ' ಎಂದು ಪ್ರತಿಭಟನಕಾರರು ವಿವರಿಸಿದರು. ಇದಕ್ಕೆ ದಿನೇಶ್ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ಶೀಘ್ರ ತೀರ್ಮಾನ ಕೈಗೊಳ್ಳುತ್ತೇನೆ ಎಂದು ತಿಳಿಸಿದ ನಂತರ ಪ್ರತಿಭಟನೆ ಕೈಬಿಡಲಾಯಿತು.

ಸುದ್ದಿಗೋಷ್ಠಿಯಲ್ಲಿ ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಬೇಸರ

ಬಿಸಿಯೂಟ ತಯಾರಕರ ಶೋಷಣೆ–ಟೀಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಸಿಯೂಟ ತಯಾರಕರನ್ನು ಎಲ್ಲಾ ಪಕ್ಷಗಳ ಸರ್ಕಾರಗಳು ಶೋಷಣೆ ಮಾಡುತ್ತಿವೆ ಎಂದು ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇವರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರಗಳು ಮನಸ್ಸು ಮಾಡುತ್ತಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರಲ್ಲಿ ಸೇವಾ ಮನೋಭಾವ ಕಡಿಮೆಯಾಗಿದೆ. ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅಧಿಕಾರ ಎಂದರೆ ಸೇವೆ ಮಾಡುವುದು ಎಂದರ್ಥ. ಆದರೆ ಇಂದಿನ ಸಂದರ್ಭದಲ್ಲಿ ಅಧಿಕಾರ ಎಂದರೆ ಹಣ, ಆಸ್ತಿ ಮಾಡುವುದು ಎಂದಾಗಿದೆ ಎಂದರು.

ಬಿಸಿಯೂಟ ತಯಾರಕರದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜೀತ ಪದ್ಧತಿಯ ಇನ್ನೊಂದು ರೂಪವಾಗಿದೆ. ಬಿಸಿಯೂಟ ತಯಾರಕರ ಜೀವನ ಕನಿಷ್ಠ ಮಟ್ಟದಲ್ಲಿ ಇದೆ. ಸರ್ಕಾರ ಇವರನ್ನು ಜೀತದಾಳುಗಳಂತೆ ನಡೆಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಚುನಾಯಿತ ಪ್ರತಿನಿಧಿಗಳಿಗೆ ಹೃದಯ ಇಲ್ಲದಂತೆ ಆಗಿದೆ. ನಮ್ಮನ್ನು ಆಳುವವರ ಅಂತಸ್ತು ಗಗನಮುಖಿಯಾಗುತ್ತಿದೆ, ಜನತೆಯ ಬದುಕು ಪಾತಾಳ ತಲುಪುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಭಾವುಕ ಮುಖ್ಯಮಂತ್ರಿ ಅಧಿಕಾರದಲ್ಲಿದ್ದಾರೆ. ಇವರ ಭಾವುಕತೆಯಾದರೂ ಬಿಸಿಯೂಟ ತಯಾರಕರ ಸಂಕಷ್ಟವನ್ನು ಪರಿಹರಿಸಲಿ. ಕನಿಷ್ಠ ವೇತನಕ್ಕೆ ಇವರ ದುಡಿಯುತ್ತಿದ್ದಾರೆ ಎಂದು ತಿಳಿಸಿದರು.

ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್‌ನ ಜಿಲ್ಲಾ ಘಟಕದ ಅಧ್ಯಕ್ಷೆ ಎಚ್. ನಿರ್ಮಲ ಮಾತನಾಡಿ ಬಿಸಿಯೂಟ ತಯಾರಕರಿಗೆ ಕನಿಷ್ಠ ವೇತನ ಜಾರಿಗೊಳಿಸುವಂತೆ ಆಗ್ರಹಿಸಿ ಡಿಸೆಂಬರ್ 2ರಿಂದ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಹಗಲುರಾತ್ರಿ ಅನಿರ್ದಿಷ್ಟಾವಧಿ ಧರಣಿ ಮಾಡಲಾಗುತ್ತದೆ ಎಂದು ತಿಳಿಸಿದರು. ಎಸ್‌ಡಿಎಂಸಿ ರಾಜ್ಯ ಘಟಕದ ಉಪಾಧ್ಯಕ್ಷ ಶಂಭುಗೌಡ ಮಾತನಾಡಿ, ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಹೋರಾಟಕ್ಕೆ ಎಸ್‌ಡಿಎಂಸಿ ಸಂಘಟನೆ ವತಿಯಿಂದ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು.ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್‌ನ ಜಿಲ್ಲಾ ಘಟಕದ ಕಾರ್ಯದರ್ಶಿ ಎಂ ಲತಾ ಇದ್ದರು

ಸುದ್ದಿ 2 ನಿಮಿಷ

29ರಂದು ಉಪನ್ಯಾಸ, ಸಂವಾದ

ಕನಕಪುರ: ನಗರದ ಹಂಸವಾಹಿನಿ ಶಾಲಾ ಆವರಣದಲ್ಲಿ 'ಮಂಥನ ಕನಕಪುರ' ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವು ನ. 29 ರ ಸಂಜೆ 6 ಗಂಟೆಗೆ ನಡೆಯಲಿದೆ.

ಲೇಖಕ ಎಸ್.ಎನ್. ಸೇತೂರಾಮ್ ಅವರು 'ಕುಟುಂಬ ವ್ಯವಸ್ಥೆಯ ಇತಿ-ಮಿತಿ' ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ವಕೀಲರ ಸಂಘಧ ಮಾಜಿ ಅಧ್ಯಕ್ಷ ವಕೀಲ ಕೆ.ನಂಜೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂವಾದದಲ್ಲಿ ಪಾಲ್ಗೊಳ್ಳುವವರು ಪ್ರೊ. ತಿಮ್ಮೇಗೌಡ 96329 00961 ಮತ್ತು ವಿನಯ್ ಎಂ. ಮಳಗಾಳು 96322 08065 ಸಂಪರ್ಕಿಸಬಹುದು.

ಮಳೆ– ದೀಪೋತ್ಸವ ಅಸ್ತವ್ಯಸ್ತ

ಮಾಗಡಿ: ಮಳೆಯಿಂದಾಗಿ ತಿರುವೆಂಗಳನಾಥ ರಂಗನಾಥ ಸ್ವಾಮಿ ಲಕ್ಷದೀಪೋತ್ಸವ ಅಸ್ತವ್ಯಸ್ತವಾಯಿತು.

ಶುಕ್ರವಾರ ಸಂಜೆ 6 ಗಂಟೆಗೆ ಆರಂಭವಾದ ಮಳೆ ರಾತ್ರಿ 8.15ರ ವರೆಗೂ ಸುರಿಯುತ್ತಲೇ ಇತ್ತು. ಕೆಲವು ಮಹಿಳೆಯರು ಸುರಿಯುವ ಮಳೆಯಲ್ಲೂ ದೀಪ ಹಚ್ಚುತ್ತಿದ್ದರು. ದೀಪೋತ್ಸವದ ಅಂಗವಾಗಿ ದೇವಾಲಯಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಕಳೆದ ವರ್ಷ ಲಕ್ಷದೀಪೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಕೊರೆಯುವ ಚಳಿಯ ನಡುವೆ ದೀಪೋತ್ಸವ ನಡೆಯಿತು. ಮಳೆಯಲ್ಲಿ ಮಿಂದೆದ್ದ ಭಕ್ತರು ದೇವರ ದರ್ಶನ ಪಡೆದರು.

ತಿರುವೆಂಗಳನಾಥ ರಂಗನಾಥ ಸ್ವಾಮಿ, ಲಕ್ಷ್ಮೀಅಮ್ಮನವರು, ಕಾಮಾಕ್ಷಿ ಅಮ್ಮನವರು, ಬೆಳಯೋರಂಗಯ್ಯ, ಶ್ರೀಕೃಷ್ಣ, ಗರುಡ, ಆಂಜನೇಯ ಸ್ವಾಮಿ, ಮಲಗಿರುವ ರಂಗನಾಥ ಸ್ವಾಮಿ, ಸೂರ್ಯದೇವರು, ಅನ್ನಪೂರ್ಣೇಶ್ವರಿ ಅಮ್ಮನವರು, ಆಳ್ವಾರರು, ಗಣಪತಿ, ಬಿಸಲುಮಾರಮ್ಮ ದೇವಿ, ಬೆಟ್ಟದ ಮೇಲಿನ ಕಂಬದ ನರಸಿಂಹ ಸ್ವಾಮಿ, ಮಾರಮ್ಮದೇವಿ, ಶ್ರೀನಿವಾಸ ಸ್ವಾಮಿ ಪರಿವಾರ ದೇವರಿಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಯಿತು.

ಸುರಿಯುವ ಮಳೆಯ ನಡುವೆ ಧ್ವನಿವರ್ಧಕ ಮೂಲಕ ದೇವರ ನಾಮ ಬಿತ್ತರಿಸಲಾಯಿತು. ಸಮಿತಿ ವತಿಯಿಂದ ಪಟಾಕಿ ಸಿಡಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಮಾತನಾಡಿದರು

'ಕಾವ್ಯಶ್ರೀ' ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಅಬ್ಬೂರು ಗ್ರಾಮದ ಎಂ.ಶ್ರೀನಿವಾಸು 'ಕಾವ್ಯಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಮಂಡ್ಯದ ಡಾ.ಜೀ.ಶಂ.ಪರಮಶಿವಯ್ಯ ಸಾಹಿತ್ಯ ವೇದಿಕೆ, ಜಿಲ್ಲಾ ವೀರಶೈವ ಮಹಾಸಭಾ, ಕನ್ನಂಬಾಡಿ ದಿನಪತ್ರಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನ.25ರಂದು ಮಂಡ್ಯ ನಗರದ ಗಾಂಧಿಭವನದ ಆವರಣದಲ್ಲಿ ನಡೆಯುವ 25ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳದಲ್ಲಿ ಈ ಪ್ರಶಸ್ತಿ ನೀಡಲಾಗುವುದು.

ಶ್ರೀನಿವಾಸು

'ನೀ ಜಿಗುಟುವಷ್ಟು ಚೂಟಿ' ಎಂಬ ಕವನ ಸಂಕಲನ ಹೊರತಂದಿದ್ದಾರೆ. ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಸದ್ಯ ಮಕ್ಕಳ ಪೌರಪ್ರಜ್ಞೆಗಾಗಿ ಸಕ್ರಿಯ ನಾಗರಿಕತ್ವ ಎಂಬ ಸರ್ಕಾರೇತರ ಸಂಸ್ಥೆಯಲ್ಲಿ ಪ್ರೇರಕರಾಗಿ ಕೆಲಸ ಮಾಡುತ್ತಿದ್ದಾರೆ.

ಭೂಮಿಕಾ ಓದಿರಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ದೂರವಾಣಿ ಸಂಖ್ಯೆ: 0821–2500981, 2500983, 2519941, 2519943, 2519948, 2519952, 2515405, 2500873 (ಅಂತರ್ಜಾಲ :www.ksoumysore.karnataka.gov.in)

ಸಂಖ್ಯೆ: ಕರಾಮುವಿ/ಪ್ರವಿ/ಪ್ರವೇಶಾತಿ–1/61/ಜಾಹಿರಾತು/2018–19 ದಿನಾಂಕ: 23.11.2018

2018–19ನೇ ಜನವರಿ ಶೈಕ್ಷಣಿಕ ಆವೃತ್ತಿಗೆ ಆನ್‌ಲೈನ್ ಪ್ರವೇಶಾತಿ ಅಧಿಸೂಚನೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳು 2018–19 ರಿಂದ 2022–23 ರವರೆಗೆ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ (ಯು.ಜಿ.ಸಿ), ನವದೆಹಲಿ ಇವರ ಮಾನ್ಯತೆ ಪಡೆದಿರುತ್ತದೆ. (ಯುಜಿಸಿ ಪ್ರಕಟಣೆ ಸಂಖ್ಯೆ: ಎಫ್.ನಂ: 14–5/2018 (ಡಿಇಬಿ–1), ದಿನಾಂಕ: 14.08.2018 ಮತ್ತು 25.10.2018)

ಆನ್‌ಲೈನ್ ಮುಖಾಂತರ ಕೆಳಕಂಡ ಶೈಕ್ಷಣಿಕ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್